


ಬಿಯರ್ ಹಬ್ಬಕ್ಕಾಗಿ ಸಿಂಗರಗೊಂಡಿರುವ ಮ್ಯೂನಿಚ್ ನಗರ




ಬಿಯರ್‌ಗೆ ಸಾರೋಟು ಗೌರವ

ಕಾಂಪ್ಲಿಮೆಂಟರಿಯಾಗಿ ಕೊಡುತ್ತಾರೆ. ಎಲ್ಲ ಅಡ್ಡೆಗಳೂ ಮಧ್ಯಾಹ್ನದ ಹೊತ್ತಿಗೆ ಭರ್ತಿ!

ಬೆಳಗಿನ ಜಾವದಿಂದಲೇ ಆರಂಭವಾಗುವ ಅಡ್ಡೆಗಳಲ್ಲಿ ಮಧ್ಯಾಹ್ನದ ಹೊತ್ತಿಗೆ ಸಂಭ್ರಮ ಮುಗಿಲು ಮುಟ್ಟುತ್ತದೆ. ತಮ್ಮ ಮೆಚ್ಚಿನ ಸಂಗೀತವನ್ನು ನುಡಿಸುವ ಬ್ಯಾಂಡಿಗೆ ಗಂಡು ಹೆಣ್ಣುಗಳು ಗುಂಪುಗುಂಪಾಗಿ ನರ್ತಿಸುತ್ತ ಸಂಭ್ರಮಿಸುತ್ತಾರೆ. ಅವರು ನಿಂತಲ್ಲಿಗೆ ಬಿಯರ್ ಬಟ್ಟಲುಗಳು ಸರಬರಾಜಾಗುತ್ತವೆ. ಒಂದು ಲೀಟರ್ ಬಿಯರ್ ತುಂಬಿದ ಹತ್ತು ಬಟ್ಟಲುಗಳನ್ನು ಒಟ್ಟಿಗೇ ತರುವ 'ಸಾಕಿ' ಹೆಣ್ಣುಗಳು ಅದಕ್ಕಾಗಿ ಹದಿನೈದು ದಿನಗಳ ತರಬೇತಿ ಪಡೆದಿರುತ್ತಾರೆ. ಸಾಮಾನ್ಯವಾಗಿ ಹೊರಗಡೆ ಬಿಯರ್‌ಗಳ ಬೆಲೆ ಐವತ್ತು ಸೆಂಟ್‌ನಿಂದ ಮೂರು ಯೂರೋಗಳಿದ್ದರೆ, (ನೀರಿಗೂ ಅಷ್ಟೇ ಬೆಲೆ!) ಈ ಅಡ್ಡೆಗಳಲ್ಲಿ ಒಂದು ಲೀಟರ್ ಬಿಯರ್ ಬೆಲೆ ಹದಿಮೂರು ಯೂರೋ! ಬೆಲೆ ಹೆಚ್ಚಾಯಿತೆಂದು ಯಾರೂ ಗೊಣಗುವುದಿಲ್ಲ. ಎಲ್ಲ ಮದ್ಯ ಕಂಪನಿಗಳೂ ಈ ಜಾತ್ರೆಗಾಗಿಯೇ ತಮ್ಮ ವಿಶೇಷ ಪರಿಣತಿ ಬಳಸಿ ತಯಾರಿಸಿದ ಉತ್ಪಾದನೆಗಳನ್ನು ತಂದಿರುತ್ತವೆ. ಅದು ಅವರ ಹೆಮ್ಮೆ. ಇದಕ್ಕೆಂದೇ ಎರಡು ಪರ್ಸೆಂಟ್ ಹೆಚ್ಚುವರಿಯಾಗಿ ಆಲ್ಕೋಹಾಲ್ ಸೇರಿಸಬಹುದೆಂಬ ನಿಯಮವನ್ನು ತಪ್ಪದೆ ಬಳಸಿಕೊಳ್ಳುತ್ತಾರೆ.

ಆಹಾರ ವಿಶೇಷಗಳ ಮಾರಾಟ ನಿರಂತರ ನಡೆಯುತ್ತಿರುತ್ತದೆ. ನೃತ್ಯದ ಸಂಭ್ರಮ ಹೆಚ್ಚಿದಂತೆ ಸಂಗೀತದ ಬ್ಯಾಂಡುಗಳ ಉತ್ಸಾಹವೂ ಮೇಳೈಸುತ್ತದೆ. ಕೆಳಗೆ ನರ್ತಿಸುತ್ತಿದ್ದವರನೇಕರು ಟೇಬಲ್ ಮೇಲೆ ಹತ್ತುತ್ತಾರೆ. ಒಮ್ಮೆಗೇ ಒಂದು ಲೀಟರ್ ಬಿಯರ್ ಖಾಲಿ ಮಾಡುವವರನ್ನು ಉತ್ತೇಜಿಸಲು ಸುತ್ತಲಿನವರೆಲ್ಲ ಕೇಕೆ ಹಾಕುತ್ತಾರೆ. ಕಾಲದ ಪರಿವೆ ಯಾರನ್ನೂ ಕಾಡುವುದಿಲ್ಲ. ರಾತ್ರಿ ಒಂದು ಗಂಟೆಗೆ ಅವತ್ತಿನ ಜಾತ್ರೆ ಬರಖಾಸ್ತಾಗುತ್ತದೆ.

## ವಿಶೇಷ ವಸ್ತ್ರಸಂಹಿತೆ!

'ಅಕ್ಟೋಬರ್ ಫೆಸ್ಟಿವಲ್' ಅವರ ಸಾಂಸ್ಕೃತಿಕ ಹಬ್ಬ. ಅದರಲ್ಲಿ ಪಾಲ್ಗೊಳ್ಳುವುದು ಅವರಿಗೆ ಸಂಭ್ರಮದ ಸಂಗತಿ. ಅದಕ್ಕೆಂದೇ ವಿಶೇಷ ವಸ್ತ್ರ ಸಂಹಿತೆಯೂ ಇದೆ. ಗಂಡಸರಿಗೆ ಬಿಳಿ ಅಂಗಿ ಮತ್ತು ಮಂಡಿಯವರೆಗೆ ಮೆತ್ತಿಕೊಂಡಂತಿರುವ ಬಣ್ಣದ ಚಣ್ಣ. ಅದನ್ನು ಕೆಲವರು ಚರ್ಮದಿಂದಲೂ ಹೊಲಿಸಿರುತ್ತಾರೆ. ಹೆಂಗಸರಿಗೆ ಬಿಳಿ ಮೇಲ್ತೊಡುಗೆ ಮತ್ತು ಬಣ್ಣ ಬಣ್ಣಗಳ ಫ್ರಾಕ್. ಫ್ರಾಕಿನ ಸುತ್ತ ಸುತ್ತಿಕೊಂಡಿರುವ ಮತ್ತೊಂದು ವಸ್ತ್ರ. ಇವುಗಳನ್ನು ತೊಟ್ಟು ಕೈಕೈ ಹಿಡಿದು ಜಾತ್ರೆಗೆ ಹೋಗುವ ಗಂಡು ಹೆಣ್ಣುಗಳ ಖುಷಿಯನ್ನು ಮ್ಯೂನಿಚ್ಚಿನ ಬೀದಿಗಳಲ್ಲಿಯೂ ಕಾಣಬಹುದು.

ಎಲ್ಲರ ದಾರಿಯೂ ಆ ಕಡೆಗೇ. ಇಡೀ ಜಾತ್ರೆಯೇ ಮೆಲ್ಲಗೆ ವಾಲಾಡುತ್ತಿರುತ್ತದೆ! ಪ್ರತಿ ಗಡಂಗಿನಲ್ಲಿಯೂ ಭೂಮಿಯ ಆಳ ಅಗಲಗಳನ್ನು ಅಳೆಯಲು ತೊಡಗುವವರಿಗೆ ಅದಕ್ಕೆಂದೇ ಸ್ವಲ್ಪ ಜಾಗ ಮೀಸಲಿಟ್ಟಿರುತ್ತಾರೆ. ಹಾಗೆ ಮೋಜಣಿ ನಡೆಸುತ್ತಿರುವವರನ್ನು ಇನ್ನೂ ಮೋಜಣಿ ಆರಂಭಿಸಿಲ್ಲದವರು ಕಂಡು ಉತ್ತೇಜಿಸಿ ಖುಷಿಪಡುತ್ತಾರೆ! ಅದೊಂದು ಆನಂದದ ಹಬ್ಬ.

## ಪ್ರವಾಸಿಗರ ಕೈಯಲ್ಲೂ ಬಿಯರ್..

ಮ್ಯೂನಿಚ್ ನಗರವನ್ನು ನಡೆದು ನೋಡಲು ಬರುವ ಪ್ರವಾಸಿಗರ ಪ್ರತಿ ಹಿಂಡಿನ ಜೊತೆಗೆ ಬಿಯರ್ ತುಂಬಿದ ಪೀಪಾಯಿಯೊಂದನ್ನು ಹೊತ್ತ ಸಣ್ಣ ಕೈಗಾಡಿಯೂ ಸಾಗುತ್ತದೆ! ಪ್ರವಾಸಿಗರು ಬಿಯರ್ ಹೀರುತ್ತ ನಗರ ಪ್ರವಾಸ ನಡೆಸುತ್ತಾರೆ. ಹಬ್ಬದ ದಿನಗಳಲ್ಲಿ ಅದು ಕಾಂಪ್ಲಿಮೆಂಟರಿ ಕೊಡುಗೆ!

ಜರ್ಮನ್ನರು 'ಬಿಯರ್ ಹಬ್ಬ'ವನ್ನು ಕೇವಲ ಕುಡಿತದ ಹಬ್ಬವನ್ನಾಗಿ ನೋಡುವುದಿಲ್ಲ. ಬದಲಿಗೆ ಅದನ್ನು ಯೂರೋಪ್ ಸಂಸ್ಕೃತಿಯ ಒಂದು ಸಭ್ಯ ಅಭಿವ್ಯಕ್ತಿಯನ್ನಾಗಿಯೂ, ಸದಭಿರುಚಿಯ ಆನಂದದ ಮೇಳವನ್ನಾಗಿಯೂ ಪರಿಭಾವಿಸುತ್ತಾರೆ. ಅದನ್ನು ಮೆಚ್ಚಿ ಪಾಲ್ಗೊಳ್ಳುತ್ತಾರೆ.

ಯೂರೋಪಿನ ಬಹುಪಾಲು ಎಲ್ಲ ದೇಶಗಳಿಂದಲೂ ಈ ಜಾತ್ರೆಗೆ ಜನ ಬರುತ್ತಾರೆ. ಮ್ಯೂನಿಚ್ ನಗರದ ಎಲ್ಲ ಹೋಟೆಲುಗಳೂ ಹದಿನೈದು ದಿನ ತುಂಬಿ ತುಳುಕುತ್ತವೆ. ಆ ಜಾತ್ರೆ ಹದಿನೈದು ದಿನಗಳ ನಂತರ ಬರಖಾಸ್ತಾಗುತ್ತದೆ. ಮುಂದಿನ ಜಾತ್ರೆಗೆ ಬಯಲು ಕಾಯುತ್ತದೆ.

ಪ್ರತಿಕ್ರಿಯಿಸಿ: feedback@sudha.co.in